

ಏಪ್ರಿಲ್ 24
ರಾಜ್ ಜನ್ಮದಿನ

## ಚೇತನೆಂಬ ರಾಜ್‌ಕುಮಾರ್ ವೃತ್ತಿಜೀವನದ ಅಪೂರ್ವ ಪಾತ್ರ

# ಭಕ್ತಿ–ಬಂಡಾಯಗಳ ವಿಶಿಷ್ಟ ಸಮೀಕರಣ

ಕಾಲಿಗೆ ತೊಡುವ ಚಪ್ಪಲಿಯನ್ನು ಭರತ ತಲೆಯ ಶಿರದಲಿ ಧರಿಸಿದ, ಸಿಂಹಾಸನದ ಮೇಲಿಟ್ಟು ಪ್ರಭುವೆಂದ. ಶರಣ ಹರಳಯ್ಯ ತೊಡೆಯ ಚರ್ಮದಿಂದ ಬಸವಣ್ಣನಿಗೆ ಚಪ್ಪಲಿ ಹೊಲೆದುಕೊಟ್ಟ. ಇವೆಲ್ಲ ಭಕ್ತಿಯ ಮಾದರಿಗಳಾದವು. ಭಕ್ತನಿಗಾಗಿ ಭಗವಂತ ಚಮ್ಮಾರನಾದ ಕಥೆ 'ಭಕ್ತ ಚೇತ' ಸಿನಿಮಾದ್ದು.

'ಭಕ್ತ ಚೇತ' 1961ರಲ್ಲಿ ತೆರೆಕಂಡ ಚಿತ್ರ. ಗಾಂಧಿಯ ಆದರ್ಶಗಳಿಂದ ಪ್ರೇರಿತರಾದ ಡಿ. ಶಂಕರ್‌ಸಿಂಗ್ ಅವರ 'ಮಹಾತ್ಮ ಪಿಕ್ಚರ್ಸ್' ಲಾಂಛನದಲ್ಲಿ ತಯಾರಾದ ಈ ಸಿನಿಮಾ, ಮಹಾತ್ಮ ಹಂಬಲಿಸಿದ ಸಮಸಮಾಜದ ಕನಸನ್ನೊಳಗೊಂಡ ಸಿನಿಮಾ. ಅಸ್ಪೃಶ್ಯತೆಗೆ ವಿರೋಧ ಸೂಚಿಸುತ್ತ, ಕಾಯಕಪ್ರಜ್ಞೆಯನ್ನು ಎತ್ತಿಹಿಡಿಯುವ ಕಥೆ ಚಿತ್ರದ್ದು. ಅರವತ್ತರ ದಶಕದಲ್ಲಿ ಅಸ್ಪೃಶ್ಯತೆಯ ವಿರುದ್ಧ ಗಟ್ಟಿ ದನಿಯೆತ್ತುವ ಈ ಸಿನಿಮಾದಲ್ಲಿ ಈ ಕಾಲಕ್ಕೂ ಸಂಗತವೆನ್ನಿಸುವ ಪ್ರಶ್ನೆಗಳಿವೆ.

ರಾಜ್‌ಕುಮಾರ್ ಅವರ ವೃತ್ತಿಜೀವನದ ಪಾತ್ರವೈವಿಧ್ಯಕ್ಕೆ ಉದಾಹರಣೆಯ ರೂಪದಲ್ಲೂ 'ಭಕ್ತಚೇತ' ಸಿನಿಮಾವನ್ನು ಗಮನಿಸಬೇಕು. ನೇಕಾರನಾದಂತೆ, ಕುಂಬಾರನಾದಂತೆ, ಬೇಡನಾದಂತೆ, ಕುರಿಗಾಹಿಯಾದಂತೆ ಚಮ್ಮಾರನಾಗುವುದೂ ರಾಜ್‌ಗೆ ಸಾಧ್ಯವಾಗಿದೆ. ನಟನೊಬ್ಬನಿಗೆ ತನಗೆ ದೊರೆತ ಪಾತ್ರವನ್ನು ನಿರ್ವಹಿಸುವುದು ವೃತ್ತಿಧರ್ಮವಾದರೂ, ಸಮಾಜ ಕಡೆಗಣ್ಣಿನಿಂದ ನೋಡುವ ಸಮುದಾಯವನ್ನು ಪ್ರತಿನಿಧಿಸುವ ಪಾತ್ರಗಳಲ್ಲಿ ಜನಪ್ರಿಯ ಕಲಾವಿದನೊಬ್ಬ ಕಾಣಿಸಿಕೊಳ್ಳುವುದಕ್ಕೆ ಸಾಮಾಜಿಕ ಮಹತ್ವವಿದೆ. ಇಂಥ ಅನುಸಂಧಾನ ಆಯಾ ಸಮುದಾಯದಲ್ಲಿ ಆತ್ಮವಿಶ್ವಾಸವನ್ನು ತುಂಬುವುದರ ಜೊತೆಗೆ, ಸಾಮಾಜಿಕ ತಾರತಮ್ಯಗಳಿಗೆ ಸಂಬಂಧಿಸಿದಂತೆ ಜನರ ಮನಸ್ಸನ್ನು ಒಂದಿಷ್ಟಾದರೂ ತಿಳಿಗೊಳಿಸುತ್ತದೆ. ರಾಜ್‌ಕುಮಾರ್ ಕನ್ನಡ ಸಂಸ್ಕೃತಿಯ ಪ್ರಮುಖ ಐಕಾನ್‌ಗಳಲ್ಲೊಬ್ಬರಾಗಿ ರೂಪುಗೊಳ್ಳುವುದರ ಹಿನ್ನೆಲೆಯಲ್ಲಿ 'ಭಕ್ತಚೇತ'ದಂತಹ ಸಿನಿಮಾಗಳು ಪ್ರಮುಖ ಕಾರಣವಾಗಿವೆ.

ಚೇತನಿಗೆ ಚಮ್ಮಾರಿಕೆಯೆನ್ನುವುದು ವೃತ್ತಿಯಾದರೂ, ಅವನು ನಂಬಿರುವುದು ಭಕ್ತಿಯನ್ನು. ಮೂರು ದಿನಗಳ ಕಾಲ ಉಪವಾಸವಿದ್ದರೂ ಮಾರಲೆಂದು ತಂದ ಎಕ್ಕಡವನ್ನು ವೃದ್ಧರೊಬ್ಬರಿಗೆ ದಾನವಾಗಿ ಕೊಡುವ ಒಳ್ಳೆಯತನ ಆತನದು. ಇಂಥ ಚೇತ ನದಿಯ ದಡದಲ್ಲಿ ನಾರಾಯಣನ ಮೂರ್ತಿಯನ್ನು ಮಣ್ಣಿನಲ್ಲಿ ರೂಪಿಸಿಕೊಂಡು ಭಕ್ತಿಯಲ್ಲಿ ಮೈಮರೆತಿದ್ದಾಗ, ಸ್ನಾನಘಟ್ಟಕ್ಕೆಂದು ಬಂದ ರಾಜಗುರುಗಳ ಶಿಷ್ಯರಿಂದ ಅವಮಾನಕ್ಕೊಳಗಾಗುತ್ತಾನೆ. ಅಳುತ್ತಾ ಕೂತ ಚೇತನನ್ನು ಸಾಧುವೊಬ್ಬರು ಸಂತೈಸಿ, ಮನೆಯಲ್ಲಿಯೇ ಪೂಜೆ ಮಾಡೆಂದು ಹೇಳಿ ಮಣ್ಣಿನ ಮೂರ್ತಿಯೊಂದನ್ನು ನೀಡುತ್ತಾರೆ. ಆ ಮೂಲಕ ಚೇತನಿಗೆ ಮನೆಯೇ ಮಂದಿರವಾಗುತ್ತದೆ.

ಚೇತ ಭಕ್ತಿಯಲ್ಲಿ ಲೌಕಿಕವನ್ನು ಮರೆಯಬಲ್ಲವನು. ಅವನ ಪತ್ನಿ ಗೌರಿ, ಭಾವುಕತೆಯಿಂದ ಕುಟುಂಬದ ಹಸಿವು ಬಗೆಹರಿಯದೆನ್ನುವ ವಾಸ್ತವವನ್ನು ಅರಿತವಳು. 'ದೂರ ಎಸೀರಿ. ಅವೆಲ್ಲ ಬ್ರಾಂಬ್ರ ದೇವರು. ನಾವು ಮುಟ್ಟಬಾರದು.ಮುಟ್ಟಿದರೆ ಮನೆಯೇ ಹಾಳಾಗುತ್ತೆ' ಎಂದು ಗಂಡನನ್ನು ಎಚ್ಚರಿಸುತ್ತಾಳೆ. 'ಎಕ್ಕಡ ಹೊಲಿಯೋದು ಬಿಟ್ಟು ಕಣ್ಮುಚ್ಚಿ ಕುಳಿತರೆ ಹೊಟ್ಟೆ ತುಂಬಲ್ಲ' ಎಂದು ಕಿವಿಮಾತು ಹೇಳುತ್ತಾಳೆ. ಮನೆ ಹೊಕ್ಕ ದೇವರು ಕುಟುಂಬದ ಹಿತಕ್ಕೆ ಶತ್ರುವಂತೆ ಕಂಡಾಗ, ಮೂರ್ತಿಯನ್ನು